PAPER CLIPPINGS
ಇಲಾಖೆ / ವಿಷಯ : DEPARTMENT / SUBJECT:
ಪತ್ರಿಕೆಯ ಹೆಸರು : NAME OF THE NEWS PAPER:
ದಿನಾಂಕ : DATE:

# ಪರಿಷತ್ ಗಲಾಟೆ ತನಿಖೆಗೆ ಸದನ ಸಮಿತಿ: ಸಂಘರ್ಷದ ಸ್ವರೂಪ

• ಎಸ್. ಲಕ್ಷ್ಮಿನಾರಾಯಣ

ಬೆಂಗಳೂರು: ವಿಧಾನಪರಿಷತ್‌ನ ಇತಿಹಾಸದಲ್ಲಿ ಕಪ್ಪು ಚುಕ್ಕೆಯಾಗಿ ದಾಖಲಾದ ವಿದ್ಯಮಾನದ ತನಿಖೆಗೆ ಸಭಾಪತಿ ಪ್ರತಾಪಚಂದ್ರಶೆಟ್ಟಿ ಅವರು ಸದನಸಮಿತಿ ರಚನೆಮಾಡಿರುವ [illegible]ವೂ ಇದೀಗ ಸಂಘರ್ಷದ ಸ್ವರೂಪ ಪಡೆದಿದೆ.

ಸದನ ಸಮಿತಿಯ ತನಿಖಾ ವ್ಯಾಪ್ತಿ ಪರಿಷತ್‌ನಲ್ಲಿ ಡಿ.15 ರಂದು ನಡೆದ ಘಟನೆಗಷ್ಟೇ ತನಿಖೆ ಸೀಮಿತವಾಗದೆ ಉಪ ಸಭಾಪತಿ ಎಸ್.ಎಲ್. ಧರ್ಮೇಗೌಡರ ಆತ್ಮಹತ್ಯೆ ಪ್ರಕರಣವರೆಗೂ ವಿಸ್ತರಿಸುವ ಸಾಧ್ಯತೆ ಇರುವುದು. ಪಕ್ಷದಲ್ಲೇ ಇದ್ದರೂ ಜೆಡಿಎಸ್ ಪಾಲಿಗೆ 'ರೆಬಲ್' ಆಗಿರುವ ಮರಿತಿಬ್ಬೇಗೌಡರ ಅಧ್ಯಕ್ಷತೆಯ ಸಮಿತಿಯಲ್ಲಿ ಬಿಜೆಪಿ ಪಾಲಿಗೆ 'ಬಂಡಾಯ'ಗಾರರಾಗಿರುವ ಎಚ್.ವಿಶ್ವನಾಥ್ ಇರುವುದು ಬಿಜೆಪಿ-ಜೆಡಿಎಸ್‌ಗೆ ನುಂಗಲಾರದ ತುತ್ತಾಗಿದೆ.

ಪ್ರಕರಣದಲ್ಲಿ ಪ್ರತ್ಯಕ್ಷ ಹಾಗೂ ಪರೋಕ್ಷ ಪಾಲ್ಗೊಳ್ಳುವಿಕೆ ಇರದ ಹಿರಿಯ ಸದಸ್ಯರನ್ನೊಳಗೊಂಡ ಸದನ ಸಮಿತಿ ರಚಿಸಲಾಗಿದೆ. ಮರಿತಿಬ್ಬೇಗೌಡರು ಉಪ ಸಭಾಪತಿಯಾಗಿ ಕೆಲಸ ಮಾಡಿದವರು. ಜತೆಗೆ ಕಾಂಗ್ರೆಸ್‌ನಿಂದ ಬಿ.ಕೆ. ಹರಿಪ್ರಸಾದ್, ಆರ್.ಬಿ.ತಿಮ್ಮಾಪುರ, ಬಿಜೆಪಿಯಿಂದ ಎಚ್.ವಿಶ್ವನಾಥ್, ಎಸ್.ವಿ.ಸಂಕನೂರ, ಅವರನ್ನು ಸೇರಿಸಲಾಗಿದೆ. ಇದು ಸರಿಯಾಗಿಯೇ ಇದೆ ಎಂಬುದು ಸಭಾಪತಿಯವರ ವಾದ.

## ಆಕ್ಷೇಪಕ್ಕೆ ಅವಕಾಶವೇ ಇಲ್ಲ

ಒಂದೊಮ್ಮೆ ಸಭಾಪತಿಯವರು ರಚನೆ ಮಾಡಿರುವ ಸದನ ಸಮಿತಿ ಬಗ್ಗೆ ಆಕ್ಷೇಪಣೆ ಇದ್ದರೆ ಪಕ್ಷಗಳು ಅದನ್ನು ಸಭಾಪತಿಯವರ ಗಮನಕ್ಕೆ ತರಬಹುದು.. ಸದನದಲ್ಲೂ ಪ್ರಸ್ತಾಪಿಸಬಹುದು. ತಮ್ಮ ಪಕ್ಷಗಳಿಂದ ಸಮಿತಿಯಲ್ಲಿ ಇರಬಹುದಾದ ಪ್ರತಿನಿಧಿ ಹೆಸರು ಶಿಫಾರಸು ಮಾಡಬಹುದು. ಆದರೆ, ಇದೀಗ ಕಾರ್ಯದರ್ಶಿಯವರು ಸದನ ಸಮಿತಿ ರಚನೆಯ ಆದೇಶ ಅಧಿಕೃತವಾಗಿ ಹೊರಡಿಸಿದರೆ ಸದನ ಸೇರುವುದರೊಳಗೆ ಸಮಿತಿ ತನಿಖೆ ಕಾರ್ಯ ಪ್ರಾರಂಭಿಸಿದ್ದರೆ ಆಗ ಆಕ್ಷೇಪಕ್ಕೆ ಅವಕಾಶವೇ ಇಲ್ಲದಂತಾಗುತ್ತದೆ ಎಂಬುದು ಬಿಜೆಪಿ-ಜೆಡಿಎಸ್‌ನ ಅಳಲು.

ಸಭಾಪತಿಯವರಿಗೆ ಅಧಿಕಾರ ಇದ್ದರೂ, ಸದನ ಸಮಿತಿ ರಚನೆ ಸದನದಲ್ಲೇ ತೀರ್ಮಾನ ಕೈಗೊಳ್ಳಬೇಕು. ಇಲ್ಲವೇ ಸಭಾನಾಯಕರು, ಪ್ರತಿಪಕ್ಷ ನಾಯಕರ ಜತೆ ಚರ್ಚಿಸಿ ಅವರ ಅಭಿಪ್ರಾಯ ಪಡೆದು ನಂತರ ತೀರ್ಮಾನ ಕೈಗೊಳ್ಳಬೇಕು. ಅದು ಸಂಪ್ರದಾಯ ಹಾಗೂ ಪದ್ಧತಿ ಎಂಬುದು ಬಿಜೆಪಿ-ಜೆಡಿಎಸ್ ಪ್ರತಿಪಾದನೆ.

ಈ ವಿಚಾರದಲ್ಲಿ ಮತ್ತೆ ರಾಜ್ಯಪಾಲರ ಮೊರೆ ಹೋಗುವ ಬಗ್ಗೆಯೂ ಬಿಜೆಪಿ-ಜೆಡಿಎಸ್ ಚಿಂತನೆ ನಡೆಸುತ್ತಿದೆ ಎಂದು ಮೂಲಗಳು ತಿಳಿಸಿವೆ. ಹೀಗಾಗಿ, ಸದನ ಸಮಿತಿ ರಚನೆಯೂ ಸಂಘರ್ಷದ ಸ್ವರೂಪ ಪಡೆದಂತಾಗಿದೆ.

ಸದನ ಸಮಿತಿ ರಚನೆ ವಿಚಾರದಲ್ಲಿ ಸಭಾಪತಿಯವರು ಟಿಪ್ಪಣಿ ಮೂಲಕ ಸೂಚನೆ ನೀಡಿ ಮೂರು ದಿನ ಕಳೆದರೂ ಪರಿಷತ್ ಕಾರ್ಯದರ್ಶಿ ಅಧಿಕೃತ ಆದೇಶ ಹೊರಡಿಸಲಿಲ್ಲ, ಕಾರ್ಯದರ್ಶಿಯವರ ವಿರುದ್ಧವೂ ಕರ್ತವ್ಯ ಲೋಪ ಆರೋಪ ಇರುವುದರಿಂದ ಒಂದು ರೀತಿಯಲ್ಲಿ ಇಕ್ಕಟ್ಟಿನ ಸ್ಥಿತಿ ಉಂಟಾಗಿದೆ.

ಆದರೆ, ಸಭಾಪತಿಯವರ ಸೂಚನೆ ಪಾಲಿಸುವುದು ಕಾರ್ಯದರ್ಶಿಯವರ ಕರ್ತವ್ಯ. ಒಂದೊಮ್ಮೆ ಅವರು ಕ್ರಮ ಕೈಗೊಳ್ಳದಿದ್ದರೆ ಕಾರ್ಯದರ್ಶಿ ಅವರನ್ನು ರಜೆ ಮೇಲೆ ಕಳುಹಿಸಿ ಬೇರೊಬ್ಬರಿಗೆ ಆ ಹೊಣೆಗಾರಿಕೆ ವಹಿಸುವ ಅಧಿಕಾರವೂ ಸಭಾಪತಿಯವರಿಗೆ ಇದೆ ಎಂದು ಹೇಳಲಾಗಿದೆ. ಆಗ, ಪ್ರಕರಣ ಮತ್ತೊಂದು ಸ್ವರೂಪ ಪಡೆದುಕೊಳ್ಳುವ ಸಾಧ್ಯತೆಯೂ ಇದೆ.

**ತಾರ್ಕಿಕ ಅಂತ್ಯದ ಉದ್ದೇಶ:** ಈ ಮಧ್ಯೆ, ಸಭಾಪತಿಯವರು ಸ್ವಯಂಪ್ರೇರಿತರಾಗಿ ರಾಜೀನಾಮೆ ಕೊಡಲು ಮುಂದಾಗಿ ಬಂಗಲೆ ಹಾಗೂ ಕಾರು ವಾಪಸ್ ಮಾಡಿದ್ದರು. ಆದರೆ, ಪ್ರಕರಣ ಬೇರೆ ಬೇರೆ ತಿರುವು ಪಡೆಯುತ್ತಿರುವುದರಿಂದ ತಾರ್ಕಿಕ ಅಂತ್ಯ ಕಾಣಿಸಲು ಸದನ ಸಮಿತಿ ರಚನೆಗೆ ತೀರ್ಮಾನಿಸಿದ್ದಾರೆ. ಈ ಪ್ರಕ್ರಿಯೆ ಮುಗಿದ ನಂತರ ರಾಜೀನಾಮೆ ಸಲ್ಲಿಸುವ ಸಾಧ್ಯತೆಯಿದೆ ಎಂದು ಹೇಳಲಾಗಿದೆ.

ಜ.28 ಕ್ಕೆ ವಿಧಾನಮಂಡಲ ಅಧಿವೇಶನ ನಿಗದಿಯಾಗುವ ಸಾಧ್ಯತೆಯಿದ್ದು 14 ದಿನದ ಮುಂಚೆ ಸಭಾಪತಿ ವಿರುದ್ಧ ಅವಿಶ್ವಾಸ ನೋಟಿಸ್ ನೀಡಲು ಬಿಜೆಪಿ -ಜೆಡಿಎಸ್ ಸಿದ್ಧತೆ ನಡೆಸಿದೆ.

**ಸಭಾಪತಿಯವರು ನನ್ನ ನೇತೃತ್ವದಲ್ಲಿ ಸದನ ಸಮಿತಿ ರಚನೆ ಮಾಡಲು ನಿರ್ಧಾರ ಮಾಡಿರುವುದು ನನಗೂ ಮಾಧ್ಯಮದ ಮೂಲಕವಷ್ಟೇ ಗೊತ್ತಾಗಿದೆ. ಅಧಿಕೃತವಾಗಿ ನನಗೆ ಯಾವುದೇ ಮಾಹಿತಿ ಬಂದಿಲ್ಲ. ಆದೇಶ ಬಂದರೆ ಎಲ್ಲ ಸದಸ್ಯರ ಜತೆಗೂಡಿ ಪ್ರಾಮಾಣಿಕ ಕಾರ್ಯ ನಿರ್ವಹಿಸಿ ವರದಿ ನೀಡಲಿದ್ದೇನೆ.**

• ಮರಿತಿಬ್ಬೇಗೌಡ

**ಸದನ ಸಮಿತಿ ರಚಿಸುವಾಗ ಸಭಾನಾಯಕರು ಸೇರಿ ಎಲ್ಲ ಪಕ್ಷಗಳ ನಾಯಕರ ಜತೆ ಚರ್ಚಿಸಿ ನಿಮ್ಮಿಂದ ಯಾರು ಸದಸ್ಯರು ಇರಲಿದ್ದಾರೆ ಎಂದು ಅಭಿಪ್ರಾಯ ಪಡೆದು ರಚಿಸಬೇಕಿತ್ತು. ಸಮಗ್ರ ದೃಷ್ಟಿಕೋನದಿಂದ ಈ ವಿಚಾರದಲ್ಲಿ ಸಭಾಪತಿ ನಿರ್ಧಾರ ಕೈಗೊಂಡಿಲ್ಲ.**

• ಎಸ್.ರವಿಕುಮಾರ್,
ಬಿಜೆಪಿಯ ವಿಧಾನಪರಿಷತ್ ಸದಸ್ಯ